# ಯಾರಿಗೆಲ್ಲ ಹಸಿವಾಗಿದೆ

■ ತಮ್ಮಣ್ಣ ಬೀಗಾರ
ಕಲೆ: ಸಂತೋಷ್ ಸಸಿಹಿತ್ಲು

ಚಿತ್ರಾಳ ಮನೆಯ ಅಂಗಳ ದೊಡ್ಡದಾಗಿಲ್ಲ. ಆದರೆ ಅಂಗಳದ ಸುತ್ತಲೂ ಹೆಚ್ಚು ಹೂ ಗಿಡಗಳನ್ನು ಬೆಳೆಸಿದ್ದಾಳೆ ಅವಳ ಅಮ್ಮ. ಚಿತ್ರಾದಿನಾಲು ಹೂ ತೋಟದಲ್ಲಿ ಓಡಾಡುತ್ತಿರುತ್ತಾಳೆ. ಚಿಟ್ಟೆಯ ಬೆನ್ನು ಹತ್ತಿ ಅದು ಹೂವಿಂದ ಹೂವಿಗೆ ತಿರುಗಿದಂತೆ ಇವಳೂ ತಿರುಗಾಡುತ್ತಾಳೆ. ಹೂ ಗಿಡದ ಮೇಲೆ ಓತಿಕ್ಯಾತ ಓಡಾಡಿದ್ದನ್ನು ನೋಡಿದ್ದಾಳೆ. ಹಸಿರು ಮಿಡತೆಯನ್ನು ಕಂಡಿದ್ದಾಳೆ. ಹಸಿರು ಹಾವೂ ಅವಳಿಗೆ ಗೊತ್ತು. ಅವಕ್ಕೆಲ್ಲಾ ಹೆದರುವುದಿಲ್ಲ ಚಿತ್ರಾ. ಓತಿಕ್ಯಾತ, ಚಿಟ್ಟೆ, ಹಸಿರು ಹಾವು, ಪುಟ್ಟ ಕಪ್ಪೆ, ಹೂವಿಗೆ ಬರುವ ಹೂವಿನ ಹಕ್ಕಿ, ತಲೆಯ ಮೇಲೆ ಜುಟ್ಟು ಇರುವ ಬುಲ್ ಬುಲ್, ಎಲೆಯನ್ನು ಮಡಿಸಿ ಗೂಡು ಮಾಡುವ ಕೆಂಪು ಇರುವೆ ಎಲ್ಲವೂ ಅವಳ ಗೆಳೆಯರೇ. ಅವನ್ನೆಲ್ಲ ಕಂಡಾಗ ಚಿತ್ರಾಅವುಗಳೊಂದಿಗೆ ಮುದ್ದು ಮುದ್ದಾಗಿ ಮಾತಿಗಿಳಿಯುತ್ತಾಳೆ.

ಅವಳ ಮನೆಯಲ್ಲಿ ಮೂರೇ ಜನ. ಚಿತ್ರಾಳ ಅಪ್ಪ ಯಾವುದೋ ಆಫೀಸಿನಲ್ಲಿ ಕೆಲಸ ಮಾಡುತ್ತಾರೆ. ಅವರು ಬೆಳಿಗ್ಗೆ ಹೋದರೆ ಬರುವಾಗ ರಾತ್ರಿ ಆಗುತ್ತದೆ. ಅಮ್ಮ ಯಾವ ಯಾವುದೋ ಕೆಲಸದಲ್ಲಿ ತೊಡಗಿರುತ್ತಾಳೆ. ಚಿತ್ರಾಒಂದು ಹೊತ್ತು ಶಾಲೆಗೆ ಹೋಗಿ ಬಂದರೆ... ನಂತರ ಹೂದೋಟದಲ್ಲಿಯೇ ಹೆಚ್ಚು ಹೊತ್ತು ಕಳೆಯುತ್ತಿರುತ್ತಾಳೆ. ಅವಳು ಒಬ್ಬಳೇ ಅಲ್ಲಿ ಓಡಾಡುವಾಗ ಸುಮ್ಮನಿರುವುದಿಲ್ಲ. ಆಗಲೇ ಹೇಳಿದ ಹಾಗೆ ಹಕ್ಕಿ, ಗಿಡ, ಹೂವು, ಹಾವು ಎಲ್ಲವುಗಳೊಂದಿಗೂ ಮಾತಿಗೆ ತೊಡಗಿರುತ್ತಾಳೆ.

ಒಂದು ದಿನ ಹಸಿರು ಹಾವು ಗಿಡದ ಮೇಲೆ ಇತ್ತು. ಚಿತ್ರಾ ನೋಡಿದಳು. ಹತ್ತಿರ ಹೋದಳು. ಹಾವು ಮಿಸುಕಾಡದೆ ಒಂದೇ ಕಡೆ ನೋಡುತ್ತಾ ಹಸಿರ ಎಲೆಗಳ ಮೇಲೆ ಮಲಗಿತ್ತು. 'ಏನು ಮಾಡ್ತಾ ಇದ್ದೀಯ, ನಿನಗೆ ಗೆಳೆಯರು ಯಾರೂ ಇಲ್ವಾ? ಹಸಿವೆ ಆಗಿದೆಯಾ? ಈ ಗಿಡದಲ್ಲಿ ಹಣ್ಣು ಇಲ್ಲ. ಓಹೋ ಕಣ್ಣಿದೆ, ನಿನಗೂ ಕಾಣುತ್ತಲ್ಲ' ಎಂದೆಲ್ಲ ಹೇಳಿದಳು. ಹಾವು ಹಾಗೆಯೇ ಇತ್ತು. ಇದಕ್ಕೆ ಏನು ಹೇಳಿದರೂ ಪ್ರಯೋಜನ ಇಲ್ಲ. ಆ ಕಡೆಗೇ ನೋಡುತ್ತಾ ಇದೆಯಲ್ಲ. ಅಲ್ಲಿ ಏನಾದರೂ ಇದೆಯಾ ಎಂದು ನೋಡಿದಳು. ಊಂ ಹೂಂ ಏನೂ ಕಾಣಲಿಲ್ಲ. ಇರಲಿ, ಎಳೆ ಬಿಸಿಲಿಗೆ ಚಳಿ ಕಾಯಿಸುತ್ತಾ ಇದೆ ಎಂದುಕೊಳ್ಳುತ್ತಾ ಮುಂದೆ ಹೋದಳು. ಅಷ್ಟರಲ್ಲಿ ಪುಟ್ಟ ಹಕ್ಕಿಯೊಂದು ಬಂದು ಹೂವಿನೊಳಗೆ ತನ್ನ ಉದ್ದ ಕೊಕ್ಕನ್ನು ತೂರಿ ಹೊರತೆಗೆಯುತ್ತಾ ಕುಳಿತಿತ್ತು. ಚಿತ್ರಾ ಹಾಗೇ ನಿಂತಳು. ಈಗ ಹಕ್ಕಿ ಬೇರೆ ಗಿಡಕ್ಕೆ ಹಾರಿತು. ಅದು ಹೂವಿಂದ ಹೂವಿಗೆ ದಾಟುತ್ತಿತ್ತು. 'ಓಹೋ ಅದು ಹೂವಿನಲ್ಲಿರುವ ಸಿಹಿ ರಸ ಹೀರಿ ಹೊಟ್ಟೆ ತುಂಬಿಸಿಕೊಳ್ಳುತ್ತಿದೆ. ಹೌದು, ಅಮ್ಮ ಹೇಳಿದ್ದು ನೆನಪಾಯಿತು. ಪಾಪ ಅದಕ್ಕೆ ಹಸಿವಾಗಿದೆ' ಎನ್ನುತ್ತಾ ಚಿತ್ರಾ ಮುಂದೆ ನಡೆದಳು.

ಇಲ್ಲಿ ಚಿಟ್ಟೆ ಬಂದಿದೆ. ಅದರದ್ದೂ ಹೂವಿಂದ ಹೂವಿಗೆ ಹಾರಾಟ. ಇದೂ ಹಕ್ಕಿಯ ಹಾಗೇ ಮಾಡುತ್ತಿದೆ. ಇದೂ ಸಿಹಿ ರಸ ಕುಡಿಯೋಕೇ ಬಂದಿದೆ. ಅಮ್ಮ ಹೇಳಿದ್ದಾಳೆ ಜೇನುನೊಣಗಳು ಹೂವಿನ ಸಿಹಿರಸ ಒಯ್ದು ಜೇನುತುಪ್ಪ ಮಾಡುತ್ತವೆ ಅಂತ. ಚಿಟ್ಟೆ ಜೇನುಗಳ ಹಾಗೆ ಮಾಡುವುದಿಲ್ಲ ಎಂದುಕೊಂಡಳು. ಅಷ್ಟರಲ್ಲಿ ಗುಂಯ್ ಅಂತ ಸಪ್ಪಳ ಕೇಳಿ ಆ ಕಡೆ ನೋಡಿದರೆ... ಜೇನು ನೊಣಕ್ಕಿಂತಲೂ ದೊಡ್ಡ ಕೀಟ. ಓ, ಇದು ನನಗೆ ಗೊತ್ತು, ಜೇನಲ್ಲ... ಜೇನಲ್ಲ... ದುಂಬಿ. ಇದನ್ನು ತೋರಿಸಿದ್ದೂ ಅಮ್ಮನೇ ಎನ್ನುತ್ತಾ ಚಿತ್ರಾಮುಂದೆ ನಡೆದಳು.

ಅಲ್ಲಿ ಚಿತ್ರಾನಾಲ್ಕು ಕುಂಡಗಳಲ್ಲಿ ಹೂ ಗಿಡಗಳನ್ನು ನೆಟ್ಟಿದ್ದಾಳೆ. ಮಣ್ಣು ಗೊಬ್ಬರ ಎಲ್ಲಾ ಹಾಕಿಕೊಟ್ಟದ್ದು ಅಮ್ಮ. ಗಿಡ ಇಟ್ಟವಳು ಚಿತ್ರಾ ಹಾಗೆ ಹೇಳಿದರೆ ಅವಳಿಗೆ ಸಿಟ್ಟು ಬರುತ್ತದೆ. ನೆಟ್ಟವಳು ನಾನು, ಬರೆ ಇಟ್ಟಿದ್ದಲ್ಲ... ದಿನಾ ನೀರು ಹಾಕೋದೂ ನಾನೇ ಎಂದಲ್ಲ ಹೇಳುತ್ತಾಳೆ. ಹೌದು ನಾನು ನೆಟ್ಟ ಗಿಡದಲ್ಲಿ ಹೂ ಆಗಿದೆಯಾ ನೋಡಬೇಕು ಎಂದುಕೊಂಡು ಚಿತ್ರಾ ಮುಂದೆ ಬಂದಳು. ಗಿಡಗಳೆಲ್ಲ ಸ್ವಲ್ಪ ಬಾಡಿ ಬಗ್ಗಿದಂತಾಗಿದ್ದವು. ಅರೆ ಯಾಕೆ ಹೀಗಾಯಿತು ಎಂದು ಗಾಬರಿಯಾದಳು. ಗಿಡಗಳನ್ನು ಮುಟ್ಟಿ ಮುಟ್ಟಿ ನೋಡಿದಳು. ಚಿತ್ರಾಳಿಗೆ ಈಗ ನೆನಪಾಯಿತು. ನಾನು ನಿನ್ನೆ ಈ ಗಿಡಗಳಿಗೆ ನೀರೇ ಹಾಕಿಲ್ಲ. ಅವು ನೀರಿಲ್ಲದೇ ಬಾಡಿವೆ. ಪಾಪ ಬಾಯಾರಿಕೆ ಆಗಿದೆ... ಎನ್ನುತ್ತಾ ಓಡಿ ಹೋಗಿ ಪುಟ್ಟ ಬಕೆಟಿನಲ್ಲಿ ನೀರು ತುಂಬಿ ತಂದು ನಾಲ್ಕು ಗಿಡಗಳಿಗೂ ಹಾಕಿದಳು. ನಾಳೆ ನಿಮಗೆ ಹಾಗೆ ಮಾಡುವುದಿಲ್ಲ ಅಂತ ಹೇಳುತ್ತಾ ಗಿಡವನ್ನು ಮೃದುವಾಗಿ ಮುಟ್ಟಿದಳು. ಅಷ್ಟರಲ್ಲಿ ದೊಡ್ಡ ದಾಸವಾಳದ ಹೂ ಒಂದು ಅರಳಿದ್ದು ಕಂಡಿತು. ಅಲ್ಲಿಗೆ ಓಡಿ ಅದನ್ನು ಮುಟ್ಟಿದಳು. ಮೂಗಿನ ಹತ್ತಿರ ತಂದು ನೋಡಿದಳು. ಪರಿಮಳವೇನು ಬರಲಿಲ್ಲ. ಆದರೆ ಎಷ್ಟು ಚೆಂದಾಗಿದೆ ಎಂದು ಹೇಳುತ್ತಾ ಮುತ್ತು ಕೊಟ್ಟಳು. ಹಾಗೇ ತಿರುಗಿ ಬಂದು ನೋಡಿದರೆ ಕುಂಡದ ಗಿಡಗಳು ಸ್ವಲ್ಪ ನೆಟ್ಟಗಾಗಿದ್ದು ಅವಳಿಗೆ ಖುಷಿಯಾಯಿತು.

'ಚಿತ್ರಾ... ರಜೆ ಅಂತ ಹೂ ತೋಟದಲ್ಲಿಯೇ ಇರ್ತಿಯಾ ಅಥವಾ ತಿಂಡಿ ತಿನ್ನಲು ಮನೆಗೆ ಬರ್ತೀಯಾ?' ಎಂದು ಅಮ್ಮ ದೊಡ್ಡದಾಗಿ ಹೇಳಿದ್ದು ಕೇಳಿಸಿತು. 'ಹೌದು ನನಗೆ ಹಸಿವಾಗಿದೆ. ಇಲ್ಲಿ ಬಂದರೆ ಅದು ಮರೆತೇ ಹೋಗುತ್ತದೆ' ಎನ್ನುತ್ತಾ ತಿರುಗಿ ಓಡಿದಳು. ಈಗ ಮತ್ತೆ ಹಸಿರು ಹಾವಿನ ನೆನಪಾಯಿತು. ಪಟ್ಟನೆ ನಿಂತು ಹಸಿರು ಹಾವು ಇದೆಯಾ ಎಂದು ತಿರುಗಿ ನೋಡಿದಳು. ಹೌದು, ಹಾವು ಹಾಗೇ ಇತ್ತು. ಆದರೆ ಅದರ ಬಾಯಲ್ಲಿ ಮಿಡತೆಯಂತಹ ಕೀಟದ ಅರ್ಧ ಭಾಗ ಹೊರಗೆ ಕಾಣುತ್ತಿತ್ತು. 'ಇದಾ ನಿನ್ನ ಆಹಾರ, ಎಷ್ಟು ಜಾಣ ನೀನು. ಸುಮ್ಮನೆ ಕುಳಿತಲ್ಲಿಯೇ ಊಟ ಹುಡುಕಿ ಬಿಡ್ತೀಯಾ! ಎಲ್ಲಾ ಗೊತ್ತಾಯಿತು. ಸಾಕು ಇನ್ನು ನಿನ್ನ ಮನೆಗೆ ಹೋಗು' ಎಂದು ಹೇಳುತ್ತಾ ಚಿತ್ರಾ ತನ್ನ ಮನೆಗೆ ಓಡಿದಳು. ■

